# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\6158\2014\ಉನಿವಿ-4 ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:23/01/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀಮತಿ.ಕೋಮಲ ಬಿನ್ ಲೇ.ಚೌಡಯ್ಯ ಚಂದ್ರಪ್ಪ, #3755, ವೀರನಗೆರೆ, ಲಷ್ಕರ್ ಮೊಹಲ್ಲಾ, ಗೌಡಬಸಪ್ಪ ಬೀದಿ, ಮೈಸೂರು ರವರ ದೂರನ್ನು ಪರಿಹರಿಸುವ ಬಗ್ಗೆ.

**********

ಮೈಸೂರು ಗೌಡಬಸಪ್ಪ ಬೀದಿ ಲಷ್ಕರ್ ಮೊಹಲ್ಲಾ ವೀರನಗೆರೆ #3755 ನಿವಾಸಿಯಾದ ಶ್ರೀಮತಿ.ಕೋಮಲ ಬಿನ್ ಲೇ.ಚೌಡಯ್ಯ ಚಂದ್ರಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಮತ್ತು ತಾಲ್ಲೂಕ್ ತಹಶೀಲ್ದಾರ್ ಶ್ರೀ.ಕಾಂತರಾಜ್ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಮೈಸೂರು ತಾಲ್ಲೂಕ್ ಕಸಬಾ ಹೋಬಳಿ ಬೆಲವತ್ತ ಗ್ರಾಮದ ಸರ್ವೆ ನಂ.139/1 ವಿಸ್ತೀರ್ಣ 27 ಗುಂಟೆ ಸ್ವತ್ತು ತಮ್ಮ ಪಿತ್ರಾರ್ಜಿತ ಸ್ವತ್ತಾಗಿದ್ದು, 2006-07ನೇ ಸಾಲಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಿದ್ದಾರೆ. ವಹಿವಾಟು ನಡೆದ ಎಂಆರ್ ನಂ.56/2006-07ರ ಕಡತದ ಪ್ರತಿ ತಮಗೆ ಈವರೆವಿಗೂ ದೊರೆತಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

ತಾವು ದಿ:15/04/05 ರಿಂದ 03/04/2008ರವರೆಗೆ ಮೈಸೂರು ತಾಲ್ಲೂಕಿನ ತಹಶೀಲ್ದಾರಾಗಿ ಕಾರ್ಯನಿರ್ವಹಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಂಆರ್ ನಂ.56/2006-07ರಲ್ಲಿ ಸರ್ವೆ

ಸಂ.139/1ರಲ್ಲಿ 23 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮ್ಯುಟೇಷನ್ ಏಕಂ ಪ್ರತಿಯಲ್ಲಿ ನಿಯಮ 46ರಂತೆ ಖಾತೆ ಬದಲಾವಣೆ ಮೂಲಕ ಶ್ರೀ.ಚೌಡಯ್ಯ @ ಚಂದ್ರಯ್ಯ ಬಿನ್ ಸಿದ್ದಯ್ಯ ರವರಿಂದ ಶ್ರೀಮತಿ.ನಾಗಮ್ಮ ಬಿನ್ ಲೇ.ಚೌಡಯ್ಯ @ ಚಂದ್ರಯ್ಯ (ಮಗಳು), ಶ್ರೀ.ಸಂಜೀವ ಬಿನ್ ಲೇ.ಚೌಡಯ್ಯ @ ಚಂದ್ರಯ್ಯ (ಮಗ) ಮತ್ತು ಶ್ರೀ.ಚೌಡಯ್ಯ ಬಿನ್ ಲೇ.ಚೌಡಯ್ಯ @ ಚಂದ್ರಯ್ಯ (ಮಗ) ಮೇಲಿನ ಜಂಟಿ ಎಂದು ಮ್ಯುಟೇಷನ್ ಆದೇಶದ ವಿವರ "ಪವತಿ ಸಬೂಬು ಮೇರೆಗೆ" ಹಕ್ಕು ಬದಲಾವಣೆ ಮಾಡುವ ಬಗ್ಗೆ ಗ್ರಾಮದಲ್ಲಿ ನಮೂನೆ–12ನ್ನು ಪ್ರಚಾರ ಪಡಿಸಿದ್ದು, ನಮೂನೆ–21ನ್ನು ಸಂಬಂಧಪಟ್ಟವರಿಗೆ ಜಾರಿಗೊಳಿಸಿದೆ. ಸದರಿ ಸ್ವತ್ತಿನ ಮೂಲ ಖಾತೆದಾರ ಶ್ರೀ.ಚೌಡಯ್ಯ @ ಚಂದ್ರಯ್ಯ ಬಿನ್ ಸಿದ್ದಯ್ಯ ರವರು ದಿ:26/10/1982ರಂದು ಪವತಿಯಾಗಿರುತ್ತಾರೆಂದು ಮತ್ತು ಅವರ ಪತ್ನಿ ಶ್ರೀಮತಿ.ಚಿಕ್ಕತಾಯಮ್ಮ ರವರು ದಿ:06/08/87ರಂದು ಪವತಿಯಾಗಿರುತ್ತಾರೆಂದು ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ. ಅವರ ಮಕ್ಕಳ ಹೆಸರಿನಲ್ಲಿ ಖಾತೆ ಮಾಡಿಕೊಡಬೇಕೆಂದು ಕೋರಿರುವ ಬಗ್ಗೆ ನಿಗದಿತ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆ ಬಂದಿಲ್ಲ. ಆದ್ದರಿಂದ, ಸದರಿಯವರ ಹೆಸರಿನಲ್ಲಿ ಸದರಿ ಸ್ವತ್ತಿನ ಜಂಟಿ ಖಾತೆ ಮಾಡಲು ಅಂಗೀಕರಿಸಿದೆ ಎಂದು ರಾಜಸ್ವ ನಿರೀಕ್ಷಕರು ದಿ:05/01/07ರಂದು ಆದೇಶಿಸಿದೆ. ಈ ಸಂಬಂಧ ದಿ:29/08/15ರಂದು ಮ್ಯುಟೇಷನ್ ನಕಲು ಪ್ರತಿಯನ್ನು ಪಡೆಯಲಾಗಿದೆ. ಹಕ್ಕು ಬದಲಾವಣೆ ಪ್ರಕ್ರಿಯೆಗಳಿಗೆ ತಹಶೀಲ್ದಾರ್ ಆದೇಶ ಮಾಡುವುದಿಲ್ಲವಾದ್ದರಿಂದ, ದೂರುದಾರರು ದೂರಿನಲ್ಲಿ ಪ್ರಸ್ತಾಪಿಸಿರುವ ತಮ್ಮ ವಿಚಾರಣೆಯನ್ನು ಕೈಬಿಡಲು ಕೋರಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಎದುರುದಾರರು ತಹಶೀಲ್ದಾರಾಗಿ ಸೇವೆ ಸಲ್ಲಿಸುತ್ತಿದ್ದ ಅವಧಿಯಲ್ಲಿ ಗ್ರಾಮ ಲೆಕ್ಕಿಗರು, ರಾಜಸ್ವ ನಿರೀಕ್ಷಕರು, ಶಿರಸ್ತೇದಾರ್ (ಭೂಮಿ ಕೇಂದ್ರ) ಇತರೆ ಅಧಿಕಾರಿಗಳು ಸೇರಿ ಎಂಆರ್ 56/06–07ರ ದಾಖಲೆಗಳನ್ನು ಸೃಷ್ಟಿಸಿದ್ದು, ಪವತಿ ಸಬೂಬು ನಂತರ ನೋಂದಣಿಯಾದ ಎಂಆರ್ 83/2007 ದಾಖಲೆಯು ಕೂಡ ಪೂರ ನಕಲು ದಾಖಲೆಯಾಗಿದೆ. ತಮ್ಮ ತಂದೆ ಶ್ರೀ.ಚೌಡಯ್ಯ @ ಚಂದ್ರಯ್ಯ ದಿ:31/10/1999ರಂದು ನಿಧನರಾಗಿದ್ದು, ಅವರ ಜೀವಿತಾವಧಿಯಲ್ಲಿ ಎಂಆರ್ 37/93–94 ರವರ ಹೆಸರಿಗೆ ಖಾತೆಯನ್ನು ಅಂಗೀಕಾರ ಮಾಡಿರುವುದು ತಾಲ್ಲೂಕ್ ಕಛೇರಿ ದಾಖಲೆಗಳಲ್ಲಿ ಕಂಡು ಬಂದಿದೆ. ತಮಗೆ ಸೇರಿದ ಭೂಮಿಯನ್ನು ಲಪಟಾಯಿಸ ಬೇಕೆಂಬ ಉದ್ದೇಶದಿಂದ ಎಂಆರ್ 56/06–07ನ್ನು ಸುಳ್ಳಾಗಿ ಸೃಷ್ಟಿಸಿದ್ದಾರೆ. ದಿನಾಂಕ:26/10/1982ರಂದು ಶ್ರೀ.ಚೌಡಯ್ಯ @ ಚಂದ್ರಯ್ಯ (ಚಂದ್ರಪ್ಪ) ಬಿನ್ ಸಿದ್ದಯ್ಯ ಮೃತರಾಗಿರುವುದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ಭೂಗಳ್ಳ ಹಾಗೂ ಗೂಂಡಾ ಆದ ಶ್ರೀ.ಅಲ್ಲಾವುದ್ದೀನ್ ಚರಾನಿಯ ಎಂಬ ವ್ಯಕ್ತಿಯಿಂದ ನೋಂದಣಿ ಮಾಡಿಕೊಂಡಿದ್ದು, ಅವರ ಹೆಸರಿಗೆ ಖಾತೆ ಮಾಡಿಕೊಳ್ಳಲು ಶ್ರೀರಂಗಪಟ್ಟಣದ ನಿವಾಸಿಯ ಆದಾಯ ದೃಢೀಕರಣ ಪತ್ರವನ್ನು ಲಗತ್ತಿಸಿ ₹2 ಲಕ್ಷ ಆದಾಯ ಎಂದು ಸುಳ್ಳು ಘೋಷಣೆ ಮಾಡಿಕೊಂಡು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ. ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 79ಎ ಮತ್ತು ಬಿ ಉಲ್ಲಂಘನೆಯಾಗಿದೆ. ಸದರಿ ಶ್ರೀ.ಅಲ್ಲಾವುದ್ದೀನ್ ಚರಾನಿಯ ರವರು ಶ್ರೀ.ದೇವರಾಜ್ @ ಚೆಲುವರಾಜ್ ಮತ್ತು ಶ್ರೀ.ಶಂಕರ್ @

ಕೇಬಲ್ ಕಿಶನ್ ಅವರೊಂದಿಗೆ ಸೇರಿ ಬೆಲವತ್ತ, ದೇವನೂರು, ಬೆಲ್ಲಹಳ್ಳಿ ಮತ್ತು ಈಳನಗೆರೆಯಲ್ಲಿ ಸುಮಾರು ₹100 ಕೋಟಿಗೂ ಹೆಚ್ಚು ಮೌಲ್ಯದ ಭೂಮಿಯನ್ನು ಲಪಟಾಯಿಸಿರುವುದಾಗಿ ಹೇಳಿದ್ದಾರೆ.

5. ದೂರಿನ ಬಗ್ಗೆ ಮೈಸೂರು ಉಪವಿಭಾಗಾಧಿಕಾರಿಗಳಿಂದ ವರದಿಯನ್ನು ಕೇಳಲಾಗಿ, ಮೈಸೂರು ತಹಶೀಲ್ದಾರ್‌ರು ದಿ:19/05/17ರ ತಮ್ಮ ವರದಿಯಲ್ಲಿ –

ದೂರುದಾರರಿಗೆ ಸೂಕ್ತ ಹಿಂಬರಹ ನೀಡಲು ಆರ್‌ಆರ್ ಶಿರಸ್ತೇದಾರ್‌ರವರಿಗೆ ಆದೇಶದಂತೆ ತಾಲ್ಲೂಕ್ ಕಛೇರಿಯಲ್ಲಿ ಪರಿಶೀಲಿಸಲಾಗಿ, ಬೆಲವತ್ತ ಗ್ರಾಮದ ಎಂಆರ್ ನಂ.56/2006–07ರ ಮೂಲ ಮ್ಯುಟೇಷನ್ ಕಡತ ಲಭ್ಯವಿಲ್ಲವೆಂದು ಭೂಮಿ ವಿಷಯ ನಿರ್ವಾಹಕರು ವರದಿ ನೀಡಿದ್ದಾರೆ. ಭೂಮಿ ತಂತ್ರಾಂಶದಲ್ಲಿ ಪರಿಶೀಲಿಸಲಾಗಿ, ಮೈಸೂರು ತಾಲ್ಲೂಕ್ ಕಸಬಾ ಹೋಬಳಿ ಬೆಲವತ್ತ ಗ್ರಾಮದ ಸರ್ವೆ ನಂ.139/1ರಲ್ಲಿ 23 ಗುಂಟೆ ಜಮೀನು ಎಂಆರ್ ನಂ.56/2006–07ರಂತೆ ಶ್ರೀ.ಚೌಡಯ್ಯ @ ಚಂದ್ರಯ್ಯ ಬಿನ್ ಸಿದ್ದಯ್ಯ ರವರಿಂದ ಪವತಿ ಮೇರೆಗೆ ಶ್ರೀಮತಿ.ನಾಗಮ್ಮ, ಶ್ರೀ.ಸಂಜೀವ ಮತ್ತು ಶ್ರೀ.ಚೌಡಯ್ಯ ಬಿನ್ ಲೇ.ಚೌಡಯ್ಯ @ ಚಂದ್ರಯ್ಯ ರವರ ಹೆಸರಿನಲ್ಲಿ ಜಂಟಿ ಪವತಿ ಖಾತೆ ದಾಖಲಾಗಿದೆ. ಸದರಿಯವರು ನೋಂದಾಯಿತ ಕ್ರಯ ಪತ್ರ ಸಂ:ಎಂವೈಎನ್–1–26874–06–07ರಂತೆ ಶ್ರೀ.ಅಲ್ಲಾವುದ್ದೀನ್ ಚರಾನಿಯ ಬಿನ್ ಹಬೀಬ್ ಅಲಿ ರವರಿಗೆ ಕ್ರಯಕ್ಕೆ ನೀಡಿದ್ದು, ಸದರಿ ಕ್ರಯದಂತೆ ಎಂಆರ್ 83/06–07 ರೀತ್ಯಾ ಕ್ರಯ ದಾಖಲಾಗಿದೆ. ತದನಂತರದಲ್ಲಿ, ಮೈಸೂರು ಉಪವಿಭಾಗದ ಉಪವಿಭಾಗಾಧಿಕಾರಿಗಳ ಆದೇಶ ಸಂ:ಆರ್‌ಆರ್‌ಟಿ (ಅ) 383/ 2007–08 ದಿ:26/07/10ರನ್ವಯ ಕ್ರಯದ ಎಂಆರ್ 83/06–07 ರದ್ದುಪಡಿಸಿ ಎಂಆರ್ 29/10–11ರಂತೆ ಮೂಲ ಖಾತೆದಾರರಾದ ಶ್ರೀ.ಚೌಡಯ್ಯ @ ಚಂದ್ರಯ್ಯ ಬಿನ್ ಸಿದ್ದಯ್ಯ ರವರ ಹೆಸರಿನಲ್ಲಿ ಖಾತೆ ದಾಖಲಿಸಿದೆ. ಮುಂದುವರೆದು, ಶ್ರೀ.ಚೌಡಯ್ಯ @ ಚಂದ್ರಯ್ಯ ಬಿನ್ ಸಿದ್ದಯ್ಯ ರವರಿಂದ ಶ್ರೀಮತಿ.ಗೌರಮ್ಮ ಕೋಂ ಲೇ.ಚಂದ್ರಪ್ಪ @ ಚೌಡಯ್ಯ ರವರ ಹೆಸರಿಗೆ ಎಂಆರ್ 44/10–11ರಂತೆ ಖಾತೆ ಪಹಣಿ ದಾಖಲಾಗಿದ್ದು, ಸದರಿ ಶ್ರೀಮತಿ.ಗೌರಮ್ಮ ರವರಿಂದ ಪುನಃ ಶ್ರೀ.ಅಲ್ಲಾವುದ್ದೀನ್ ಚರಾನಿಯ ರವರಿಗೆ ಖಾತೆ ವರ್ಗಾವಣೆ ಸಂದರ್ಭದಲ್ಲಿ ತಕರಾರು ದಾಖಲಾಗಿ ಎಂಆರ್ 32/13–14ರಂತೆ ಹಾಗೂ ತಹಶೀಲ್ದಾರ್‌ರವರ ಪ್ರಕರಣ ಸಂ:ಆರ್‌ಆರ್‌ಟಿ (ತಕರಾರು) 147/2014 ದಿ:03/07/15ರಂತೆ ಎಂಆರ್ 5/15–16 ರೀತ್ಯಾ ತಕರಾರಿನ ಊರ್ಜಿತಕ್ಕೆ ಒಪ್ಪಿಗೆಯಾಗಿದೆ. ಈಗ ಹಾಲಿ ಖಾತೆ ಮತ್ತು ಪಹಣಿಯು ಶ್ರೀಮತಿ.ಗೌರಮ್ಮ ಕೋಂ ಲೇ.ಚಂದ್ರಪ್ಪ @ ಚೌಡಯ್ಯ ರವರ ಹೆಸರಿನಲ್ಲಿ ದಾಖಲಾಗಿದೆ. ಇದರಂತೆ ಅರ್ಜಿದಾರರಿಗೆ ದಿ:19/05/17ರಂದು ಹಿಂಬರಹ ನೀಡಲಾಗಿದೆಯೆಂದು ಹೇಳಿದ್ದಾರೆ.

6. ಸದರಿ ವರದಿಗೆ ದೂರುದಾರರ ಉತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಉತ್ತರದಲ್ಲಿ ಪ್ರತ್ಯುತ್ತರದಲ್ಲಿ ಹೇಳಿರುವ ಅಂಶಗಳನ್ನೇ ಪುನರುಚ್ಚರಿಸಿದ್ದಾರೆ.

7. **ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:**

1) ಮೈಸೂರು ತಾಲ್ಲೂಕ್ ಕಸಬಾ ಹೋಬಳಿ ಬೆಲವತ್ತ ಗ್ರಾಮದ ಸರ್ವೆ ನಂ.139/1 ವಿಸ್ತೀರ್ಣ 27 ಗುಂಟೆ ಸ್ವತ್ತು ತಮ್ಮ ಪಿತ್ರಾರ್ಜಿತ ಸ್ವತ್ತಾಗಿದ್ದು, 2006-07ನೇ ಸಾಲಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಮಾರಾಟ ಮಾಡಿದ್ದಾರೆ ಮತ್ತು ವಹಿವಾಟು ನಡೆದ ಎಂಆರ್ ನಂ.56/2006-07ರ ಕಡತದ ಪ್ರತಿಯು ದೂರುದಾರರಿಗೆ ದೊರೆತಿಲ್ಲವಾಗಿದೆ. ದೂರುದಾರರ ತಂದೆಯ ಹೆಸರು ಶ್ರೀ.ಚೌಡಯ್ಯ ಬಿನ್ ಚಂದ್ರಪ್ಪ ಎಂದಾಗಿದ್ದು, ಸದರಿ ಸ್ವತ್ತು ಶ್ರೀ.ಚೌಡಯ್ಯ ಬಿನ್ ಚಂದ್ರಪ್ಪ ರವರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿದೆ. ದೂರುದಾರರ ತಂದೆ ಶ್ರೀ.ಚೌಡಯ್ಯ ಬಿನ್ ಚಂದ್ರಪ್ಪ ರವರು ದಿ:31/10/1999ರಂದು ಮೃತಪಟ್ಟಿದ್ದು, ಅಂದಿನಿಂದ 2005-06ರವರೆಗೂ ಅವರ ಹೆಸರಿನಲ್ಲಿಯೇ ಸ್ವತ್ತಿನ ಖಾತೆ ಇತ್ತೆಂದು ದಿ:17/11/2012ರಂದು ದೂರುದಾರರು ಮೈಸೂರು ಜಿಲ್ಲಾಧಿಕಾರಿಗಳಿಗೆ ಕೊಟ್ಟ ಅರ್ಜಿಯಲ್ಲಿ ಹೇಳಿದ್ದಾರೆ. ದಿ:05/02/2016ರ ದೂರುದಾರರ ಪ್ರತ್ಯುತ್ತರದಲ್ಲಿ, ದೂರುದಾರರ ತಂದೆಯ ಜೀವಿತಾವಧಿಯಲ್ಲಿ ಎಂಆರ್ 37/93-94 ಅವರ ಹೆಸರಿಗೆ ಖಾತೆ ಅಂಗೀಕಾರವಾಗಿದೆ. ಬೆಲವತ್ತ ಗ್ರಾಮದ ಸರ್ವೆ ನಂ.139/1 ವಿಸ್ತೀರ್ಣ 27 ಗುಂಟೆ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳಿಲ್ಲ. ಸದರಿ ಸ್ವತ್ತು ಅವರ ಪಿತ್ರಾರ್ಜಿತ ಸ್ವತ್ತು ಹಾಗೂ ಅವರ ತಂದೆಯ ಹೆಸರಿನಲ್ಲಿದ್ದ ಬಗ್ಗೆ ಯಾವುದೇ ದಾಖಲೆಗಳಿಲ್ಲ;

2) ಎಂಆರ್ 56/2006-07ರಲ್ಲಿರುವ ನಮೂದುಗಳಲ್ಲಿ, ಬೆಲವತ್ತ ಗ್ರಾಮದ ಸರ್ವೆ ನಂ.139/1 ಶ್ರೀ.ಚೌಡಯ್ಯ @ ಚಂದ್ರಯ್ಯ ಬಿನ್ ಸಿದ್ದಯ್ಯ ರವರ ಹೆಸರಿನಲ್ಲಿದ್ದ ಬೆಲವತ್ತ ಗ್ರಾಮದ ಸರ್ವೆ ನಂ.139/1 ವಿಸ್ತೀರ್ಣ 23 ಗುಂಟೆ ಸ್ವತ್ತು ಅವರ ಮಕ್ಕಳಾದ 1)ಶ್ರೀಮತಿ.ನಾಗಮ್ಮ, 2) ಶ್ರೀ.ಸಂಜೀವ ಮತ್ತು 3) ಶ್ರೀ.ಚೌಡಯ್ಯ ರವರ ಹೆಸರಿನಲ್ಲಿ ಹಕ್ಕು ಬದಲಾವಣೆಯಾಗಿರುವುದು ಕಂಡು ಬಂದಿದೆ. ಮೂಲ ಖಾತೆದಾರರಾದ ಶ್ರೀ.ಚೌಡಯ್ಯ @ ಚಂದ್ರಯ್ಯ ಬಿನ್ ಸಿದ್ದಯ್ಯ ರವರು ದಿ:26/10/1982ರಂದು ಮತ್ತು ಅವರ ಪತ್ನಿ ಶ್ರೀಮತಿ.ಚಿಕ್ಕತಾಯಮ್ಮ ದಿ:06/08/1987ರಂದು ಮೃತಪಟ್ಟಿರುತ್ತಾರೆಂದು ಅವರ ಮಕ್ಕಳು (ಮೇಲೆ ಹೇಳಿದವರು) ಪ್ರಮಾಣ ಪತ್ರ ಸಲ್ಲಿಸಿ ತಮ್ಮ ಹೆಸರಿಗೆ ಖಾತೆ ಮಾಡಿಕೊಡಬೇಕೆಂದು ಕೋರಿಕೊಂಡಿರುವುದು ಸದರಿ ಎಂಆರ್ 56/2006-07ರ 'ಮ್ಯುಟೇಷನ್ ಆದೇಶದ ವಿವರ' ದಲ್ಲಿ ದಾಖಲಾಗಿದೆ. 1) ಶ್ರೀಮತಿ.ನಾಗಮ್ಮ, 2) ಶ್ರೀ.ಸಂಜೀವ ಮತ್ತು 3) ಶ್ರೀ.ಚೌಡಯ್ಯ ರವರು ಸದರಿ ಸ್ವತ್ತನ್ನು ದಿ:29/01/07ರ ನೋಂದಾಯಿತ ಕ್ರಯ ಪತ್ರದಡಿ ಶ್ರೀ.ಅಲ್ಲಾವುದ್ದೀನ್ ಚರಾನಿಯ ಬಿನ್ ಹಬೀಬ್ ಅಲಿ ರವರಿಗೆ ಕ್ರಯಕ್ಕೆ ನೀಡಿದ್ದು, ಸದರಿ ಕ್ರಯದಂತೆ ಎಂಆರ್ 83/06-07 ರೀತ್ಯಾ ದಾಖಲಾಗಿದೆ. ನಂತರದಲ್ಲಿ ಮೈಸೂರು ಉಪವಿಭಾಗಾಧಿಕಾರಿಗಳು ತಮ್ಮ ಆದೇಶ ಸಂ:ಆರ್‌ಆರ್‌ಟಿ (ಅ) 383/07-08 ದಿ:26/07/10ರನ್ವಯ ಸದರಿ ಎಂಆರ್ 83/06-07ನ್ನು ರದ್ದುಪಡಿಸಿ, ಮೂಲ ಖಾತೆದಾರರಾದ ಶ್ರೀ.ಚೌಡಯ್ಯ @ ಚಂದ್ರಯ್ಯ ಬಿನ್ ಸಿದ್ದಯ್ಯ ರವರ ಹೆಸರಿನಲ್ಲಿ ಖಾತೆ ದಾಖಲಿಸಲು ಆದೇಶ ಮಾಡಿದ್ದಾರೆ. ಅದರಂತೆ ಎಂಆರ್ 29/10-11 ಶ್ರೀ.ಚೌಡಯ್ಯ @ ಚಂದ್ರಯ್ಯ ಬಿನ್ ಸಿದ್ದಯ್ಯ ರವರ ಹೆಸರಿಗೆ ದಾಖಲಾಗಿದೆ. ಮುಂದುವರೆದು ಶ್ರೀ.ಚೌಡಯ್ಯ @ ಚಂದ್ರಯ್ಯ ಬಿನ್ ಸಿದ್ದಯ್ಯ ರವರಿಂದ ಶ್ರೀಮತಿ.ಗೌರಮ್ಮ ಕೋಂ ಲೇ.ಚಂದ್ರಪ್ಪ @ ಚೌಡಯ್ಯ ರವರ ಹೆಸರಿಗೆ ಹಕ್ಕು ಬದಲಾವಣೆಯಾಗಿದ್ದು,

ಅಮು ಪಿಂಆರ್ 44/10–11ರನ್ವಯ ಆಗಿಪೆ. ಸಂತರದಲ್ಲಿ ಸದರಿ ಸ್ವತ್ತು ಶ್ರೀ.ಅಲ್ಲಾವುದ್ದೀನ್ ಚರಾನಿಯ ಬಿನ್ ಹಬೀಬ್ ಅಲಿ ರವರ ಹೆಸರಿಗೆ ಆರ್‌ಆರ್‌ಟಿ 147/2014ರ ಆದೇಶ ದಿ:03/07/15ರಂತೆ ಹಕ್ಕು ಬದಲಾವಣೆಯಾಗಿದೆ;

3) ಶ್ರೀ.ಅಲ್ಲಾವುದ್ದೀನ್ ಚರಾನಿಯ ಬಿನ್ ಹಬೀಬ್ ಅಲಿ ರವರ ಹೆಸರಿಗೆ ಆದ ಕ್ರಯಪತ್ರ ದಿನಾಂಕ:29/01/2007 ಕರ್ನಾಟಕ ಭೂ ಸುದಾರಣೆ ಕಾಯಿದೆ, ಕಲಂ 79ಎ ಮತ್ತು ಬಿ ರ ಉಲ್ಲಂಘನೆಯಾಗಿದ್ದು, ಸದರಿ ಶ್ರೀ.ಅಲ್ಲಾವುದ್ದೀನ್ ಚರಾನಿಯ ಬಿನ್ ಹಬೀಬ್ ಅಲಿ ರವರ ಆಗಿನ ವ್ಯವಸಾಯೇತರ ವಾರ್ಷಿಕ ಆದಾಯ ₹2 ಲಕ್ಷಕ್ಕಿಂತಲೂ ಮೇಲ್ಪಟ್ಟಾಗಿದೆಯೆಂದು ಸದರಿಯವರೇ 2006–07ನೇ ಸಾಲಿನಲ್ಲಿ ಆದಾಯ ತೆರಿಗೆ ಇಲಾಖೆಗೆ ರಿಟರ್ನ್ ಸಲ್ಲಿಸಿದ್ದಾರೆ. ಅವರ ಪ್ಯಾನ್ ಸಂ.ಎಬಿಪಿಎಲ್ ಪಿಪಿ 43075 ಆಗಿದೆ. ಸದರಿಯವರು ಬೆಂಗಳೂರಿನ ನಿವಾಸಿಯಾಗಿರುವುದು ಕ್ರಯ ಪತ್ರದಲ್ಲಿ ಕಂಡು ಬರುತ್ತಿದ್ದು, ಅವರ ಖಾಯಂ ವಿಳಾಸ ಹೊರ ರಾಜ್ಯದ್ದಾಗಿರುವುದು ಆದಾಯ ಇಲಾಖೆಗೆ ಸಲ್ಲಿಸಿದ ದಾಖಲೆಗಳಲ್ಲಿ ಕಂಡು ಬಂದಿದೆ. ಸದರಿಯವರ ಹೆಸರಿಗಾದ ಕ್ರಯ ಕರ್ನಾಟಕ ಭೂ ಸುಧಾರಣಾ ಕಾಯಿದೆ, ಕಲಂ 79ಎ ಮತ್ತು ಬಿ ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

8. ಆದ್ದರಿಂದ, ಸದರಿ ಶ್ರೀ.ಅಲ್ಲಾವುದ್ದೀನ್ ಚರಾನಿಯ ಬಿನ್ ಹಬೀಬ್ ಅಲಿ ರವರ ಹೆಸರಿಗಾದ ಕ್ರಯ ಕರ್ನಾಟಕ ಭೂ ಸುಧಾರಣಾ ಕಾಯಿದೆ, ಕಲಂ 79ಎ ಮತ್ತು ಬಿ ಉಲ್ಲಂಘನೆಯಾಗಿರುವ ಅಂಶದ ಬಗ್ಗೆ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, **ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.**

Sd/- 24/1/18

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ–2,**
**ಕರ್ನಾಟಕ ರಾಜ್ಯ.**